ಚಿಂತಾಕ್ರಾಂತರನ್ನಾಗಿ ಮಾಡುತ್ತದೆ ಎಂಬುದೇ ಆಗಿದೆ. ಆಸ್ತಿಕ ಮಹಾಶಯರು ಮನುಷ್ಯರ ಜೊತೆಗೆ ದೇವರುಗಳನ್ನೂ ಸೇರಿಸಿಕೊಳ್ಳಬಹುದು; ಲೇಖಕನದೇನೂ ಆಕ್ಷೇಪವಿಲ್ಲ. ನಾಸ್ತಿ ಅಂದರೆ ಆಸ್ತಿಕ ಮಹಾಶಯರು ಇನ್ನೂ ಹೆಚ್ಚಿನ ಆಸ್ತಿಕರಾಗುವ ಸಂಭವವಿರುವುದರಿಂದ ಪ್ರಬಂಧಕಾರನಾದ ನಾನು ಮಧ್ಯ ಪ್ರವೇಶಿಸುವುದಿಲ್ಲ.

ನಾನು ಚಿಕ್ಕವನಾಗಿದ್ದಾಗ ಆಡುತ್ತಿದ್ದ ಆಟಗಳ ಪೈಕಿ ಒಂದರಲ್ಲಿ ಸಾಲವೂ ನುಸುಳಿಕೊಂಡಿತ್ತು ಮತ್ತು ಅದರ ಬಗ್ಗೆ ಹೆಚ್ಚು ಅರಿವಿಲ್ಲದೆ ನನ್ನ ಜೊತೆಗಾರರೊಂದಿಗೆ ನನ್ನ ಪಾಡಿಗೆ ನಾನು ಆಡುತ್ತಿದ್ದೆ; ಮಕ್ಕಳು ಇಂದೂ ಆ ಶಿಶು ಪ್ರಾಸದ ಆಟವನ್ನು ಆಡುತ್ತಿರುತ್ತಾರೆ–

ಅಬ್ಬಬ್ಬಾ ಅಂತು
ಹಬ್ಬಕ್ಕೆ ಅಕ್ಕಿ ಇಲ್ಲ ಅಂತು
ಸಾಲ ಮಾಡಿದ್ರಾಯ್ತು ಅಂತು
ಸಾಲ ತೀರ್ಸೋವ್ರು ಯಾರು?
ನಾನಿಲ್ಲವ ಜಗಮೊಂಡ

ಕೈನ ಐದೂ ಬೆರಳುಗಳನ್ನು ಆಧರಿಸಿ, ಈ ಶಿಶುಪ್ರಾಸದ ಆಟ ಹುಟ್ಟಿಕೊಂಡಿದೆ. ಕಿರು ಬೆರಳಿನಿಂದ ಆರಂಭವಾಗಿ ಜಗಮೊಂಡನಾದ ಹೆಬ್ಬೆರಳಿಗೆ ಬಂದಾಗ ಈ ಆಟ ಅಥವಾ ಶಿಶುಪ್ರಾಸ ನಿಲ್ಲುತ್ತದೆ. ಹಾಗೆ ನೋಡಿದರೆ ಮಾಡಿದ ಸಾಲ ತೀರಿಸಲು ಮನೆಯಲ್ಲಿ ಯಾರಾದರೊಬ್ಬರು 'ಜಗಮೊಂಡ'ನಾಗಿ ನಿಲ್ಲಬೇಕು ಎಂಬುದು ಇದರ ಸಂದೇಶ. ಮಕ್ಕಳ ಆಟದೊಳಗೊಂದು ಮಹತ್ವದ ಸಂಗತಿ ಅಡಗಿದೆಯಲ್ಲ! ಇದು ಸಾಲದ ಮಹಿಮೆಯೇ ಅಲ್ಲವೆ?

ಕೆಲವು ಸಲ ಆಕಸ್ಮಿಕವಾಗಿಯೂ ಮನುಷ್ಯ ಸಾಲಿಗನೂ ಆಗಬಹುದು ಸಾಲಗಾರನೂ ಆಗಬಹುದು ಎಂಬುದು ನನ್ನ ಅನುಭವದ ಅನಿಸಿಕೆ. ನಿದರ್ಶನಕ್ಕೆ ನೋಡಿ–ನಾನೊಮ್ಮೆ ಸಿಟಿ ಬಸ್ಸಿನಲ್ಲಿ ಹೋಗುತ್ತಿರುವಾಗ ನನ್ನೆದುರು ಕೂತ ಪ್ರಯಾಣಿರೊಬ್ಬರು ಇಪ್ಪತ್ತು ರೂಪಾಯಿನ ನೋಟೊಂದನ್ನು ನೀಡಿ, ತಾವು ಹೋಗುವಲ್ಲಿಗೆ ಟಿಕೆಟ್ ಪಡೆದರು. ಅದರ ಬೆಲೆ ಹನ್ನೊಂದಾಗಿತ್ತು. ಅವರಿಗೆ ಬಾಕಿ ಒಂಬತ್ತು ರೂಪಾಯಿ ಚಿಲ್ಲರೆ ಕೊಡಲು ಕಂಡಕ್ಟರ್ ಅವರಿಂದ ಒಂದು ರೂಪಾಯಿಯನ್ನು ಅಪೇಕ್ಷಿಸಿದಾಗ ಅವರು ಇರುವ ಜೇಬನ್ನೆಲ್ಲ ತಡಕಾಡಿದರು. ಒಂದು ರೂಪಾಯಿ ಇರಲಿಲ್ಲ, ಹಾಗಾಗಿ ಸಿಗಲಿಲ್ಲ. ಹಾಗೆಂದು ಹತ್ತು ರೂಪಾಯಿಯನ್ನು ಅವರು ಬಿಡುವ ಹಾಗೂ ಇರಲಿಲ್ಲ. ಇನ್ನೇನು ಮಾಡುತ್ತಾರೆ–ಅವರ ಎದುರಿಗೆ ದಿಮ್ಮನೆ ಕೂತಿದ್ದ ನನ್ನ ಕಡೆಗೆ ಒಂದು ಕಿರು ನಗೆ ಬೀರಿ, 'ದಯವಿಟ್ಟು ಒಂದು ರೂಪಾಯಿ ಚಿಲ್ಲರೆ ಇದ್ದರೆ ಕೊಡಿ, ಆಮೇಲೆ ಕೊಡ್ತೀನಿ' ಅಂತ ಕೇಳಿದರು. ಆ ಹೊತ್ತಿನಲ್ಲಿ ಒಂದು ರೂಪಾಯಿ ಚಿಲ್ಲರೆ ಇಲ್ಲ ಅನ್ನುವಷ್ಟು ಬಡವ ನಾನಾಗಿರಲಿಲ್ಲ ಅಥವಾ ಜುಗ್ಗ ಮನಸ್ಸಿನವನೂ ಆಗಿರದಿದ್ದ ಕಾರಣ ನನ್ನ ಜೇಬಿಗೆ ಕೈ ಹಾಕಿದೆ. ಒಂದು ರೂಪಾಯಿ ಬಿಲ್ಲೆ ಅಡಿಯಿಂದ ಮೇಲೆದ್ದು ಬಂದಿತು. ನಗು ನಗುತ್ತಲೇ ಅವರತ್ತ ಅದನ್ನು ನೀಡಿ, 'ತೆಗೆದುಕೊಳ್ಳಿ' ಅಂದೆ. ಸಭ್ಯಸ್ಥರಾದ ಅವರು ಸಂಕೋಚದಿಂದಲೇ ಅದನ್ನು ಈಸಿಕೊಂಡು, 'ಆಮೇಲೆ ಕೊಡ್ತೀನಿ' ಅಂದರು. 'ಆಯ್ತು' ಅಂದೆ. ತಥ್ಯವೇನೆಂದರೆ ಅವರಿಗೆ ನಾನು ಒಂದು ರೂಪಾಯಿ ಕೊಡುತ್ತಿದ್ದ ಹಾಗೆ ನಾನು ಸಾಲಿಗನಾದೆ, ಅವರು ಸಾಲಗಾರರಾದರು. ನನ್ನಂತೆ ನಿಮಗೂ ಕೆಲವಾರು ಅನುಭವಗಳಾಗಿರುತ್ತವೆ ಅಂತ ನನ್ನ ತೀರ್ಮಾನ. ಏನಂತೀರಿ?

ಇಲ್ಲೇ ನನ್ನ ಸಾಹಿತಿ ಗೆಳೆಯರೊಬ್ಬರ ಸಾಲ ಪ್ರಸಂಗವನ್ನು ಸಹೃದಯರಾದ ತಮ್ಮ ಮುಂದೆ